

ವಜ್ರದ ಗಣಿಯ ನೋಟ

## ಗಣಿಗಾರಿಕೆಯೂ, ಆರೋಗ್ಯವೂ..

ವಜ್ರ ಲಾಭದಾಯಕ ಉದ್ಯಮ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಗಣಿಗಾರಿಕೆ ಕಾರ್ಮಿಕರ ಮೇಲೆ ಉಂಟು ಮಾಡುವ ಅನಾರೋಗ್ಯದ ಬಗ್ಗೆಯೂ ಸಾಕಷ್ಟು ದೂರುಗಳಿವೆ. ಗಣಿಗಾರಿಕೆ ಸುರಕ್ಷಿತವೂ ಅಲ್ಲ, ಗಣಿಗಾರಿಕೆ ಸ್ಥಳದಲ್ಲಿ ಸಾಕಷ್ಟು ಜಾಗರೂಕತೆ ವಹಿಸಬೇಕು. ಸಂಶೋಧಕರಾದ ಮೇಘನ್ ಕ್ಲಾರ್ಕ್ ಅವರು ಒಟ್ಟು ಏಳು ಗಣಿಗಾರಿಕೆ ಆರೋಗ್ಯ ಸೂತ್ರಗಳನ್ನು ಗೊತ್ತು ಮಾಡಿದ್ದಾರೆ.

ಕಲ್ಲಿದ್ದಲ ಧೂಳನ್ನು ಉಸಿರಾಡಬೇಕಾದ ಅನಿವಾರ್ಯತೆ ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿದೆ. ಇದರಿಂದ ಶ್ವಾಸಕೋಶ ಸಮಸ್ಯೆ ಎದುರಾಗುತ್ತದೆ. 'ಮೈನರ್ಸ್ ಲಂಗ್ ಅಥವಾ ಬ್ಲ್ಯಾಕ್ ಲಂಗ್' ಎಂದು ಕರೆಯುವ ಈ ರೋಗದಿಂದ ಉಸಿರಾಟಕ್ಕೆ ತೊಂದರೆ, ಶ್ವಾಸಕೋಶದ ಜೀವಕಣಗಳಿಗೆ ತೊಂದರೆ ಉಂಟಾಗಿ ತೀವ್ರತರವಾದ ಶ್ವಾಸಕೋಶ ಹಾನಿ ಉಂಟಾಗುವ ಅಪಾಯ ಇದೆ.

ಗಣಿಗಳಲ್ಲಿ ಕೆಲಸ ಮಾಡುವಾಗ ವಿಪರೀತ ಶಬ್ದ ಬರುತ್ತದೆ. ಗಣಿಗಳಲ್ಲಿ ನಿರಂತರವಾಗಿ ಅಗೆಯುವ ಮತ್ತು ಬಂಡೆಗಳನ್ನು ಕೊರೆಯುವ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಕಿವಿಯ ತಮಟೆಗೆ ಹಾನಿ ಆಗುವ ಅಪಾಯವೂ ಇದೆ. ಅಲ್ಲದೆ ನಿದ್ರಾಹೀನತೆ, ಏಕಾಗ್ರತೆ ಸಮಸ್ಯೆ ಉಂಟಾಗುವ ಸಾಧ್ಯತೆಯೂ ಇದೆ. ಇದನ್ನು ನಿವಾರಿಸಲು ಗಣಿ ಕಂಪೆನಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎನ್ನುತ್ತಾರೆ ಅವರು.

ದೈಹಿಕ ಕಂಪನ (ಬಾಡಿ ವೈಬ್ರೇಷನ್) ಮತ್ತೊಂದು ಪ್ರಮುಖ ತೊಂದರೆ. ದೊಡ್ಡ ದೊಡ್ಡ ಮೆಷಿನ್‌ಗಳನ್ನು ಬಳಸಿ ಗಣಿಗಾರಿಕೆ ಮಾಡುವುದರಿಂದ ಕಾರ್ಮಿಕರಲ್ಲಿ ಫಲವತ್ತತೆ ಸಮಸ್ಯೆ, ದೃಷ್ಟಿ ಹಾನಿ, ಅಜೀರ್ಣ ಮತ್ತು ಹೃದಯಕ್ಕೆ ಸಂಬಂಧಿಸಿದ ತೊಂದರೆ ಹೆಚ್ಚು ಕಂಡುಬರುತ್ತದೆ. ಸೂರ್ಯನ ಅತಿನೇರಳೆ ಕಿರಣಗಳು ಮೈಮೇಲೆ ನೇರವಾಗಿ ಬೀಳುವುದರಿಂದಲೂ ಚರ್ಮಕ್ಕೆ ಹಾನಿಯಾಗುತ್ತದೆ. ಬಿಸಿಯಾದ ಜಾಗದಲ್ಲಿ ಬಹಳ ಹೊತ್ತು ನಿರಂತರವಾಗಿ ದುಡಿಯುವುದು, ರಾಸಾಯನಿಕಗಳನ್ನು ಬಳಸುವುದು ಅತ್ಯಂತ ಅಪಾಯಕರ ಸನ್ನಿವೇಶವನ್ನು ನಿರ್ಮಾಣ ಮಾಡುತ್ತಿದೆ.

### ವಿನ್ಯಾಸಗಾರನ ಕಲ್ಪನೆಯ ಹಿಂದೆ..

'ವಜ್ರದ ಒಡವೆ ವಿನ್ಯಾಸಗಳನ್ನು ರೂಪಿಸುವಾಗ ನಿಸರ್ಗ, ಜಿಯೊಮೆಟ್ರಿಕಲ್, ಹೂವು, ಹಣ್ಣುಗಳು, ದೇವಾನುದೇವತೆಗಳ ಪ್ರತಿರೂಪ.. ಮುಂತಾದ ಥೀಮ್ ಇಟ್ಟುಕೊಂಡು ವಿನ್ಯಾಸ ಮಾಡುತ್ತೇವೆ. ಕೆಲವೊಮ್ಮೆ ಗ್ರಾಹಕರು ತಮಗೆ ಇಷ್ಟವಾದ ವಿನ್ಯಾಸವನ್ನು ಕೇಳಿಕೊಂಡು ಬಂದರೆ ಅವರ ಇಚ್ಛೆಯಂತೆ ಆಭರಣ ಮಾಡಿಕೊಡಲಾಗುತ್ತದೆ' ಎನ್ನುತ್ತಾರೆ ಕೀರ್ತಿಲಾಲ್ಸ್ ಜ್ಯುವೆಲ್ಲರಿಯ ವಿನ್ಯಾಸ ವಿಭಾಗದ ನಿರ್ದೇಶಕಿ ಸೀಮಾ ಮೆಹ್ತಾ.

'ಸ್ಮಾರ್ಟ್ ಜ್ಯುವೆಲ್ಲರಿ' ಎಂಬ ಹೊಸ ಪರಿಕಲ್ಪನೆಯಲ್ಲಿ ಒಟ್ಟು ಐದು ವಿನ್ಯಾಸಗಳನ್ನು ರೂಪಿಸಿದ್ದೇವೆ. 'ರೇರ್ ಅಂಡ್ ಕ್ಯಾಷುವಲ್', 'ಜಿಯೊಮೆಟ್ರಿಕ್', 'ವೈರ್ ಇನ್ ಗೋಲ್ಡ್ ವರ್ಕ್'.. ಇವೆಲ್ಲ ಹೊಸ ಪರಿಕಲ್ಪನೆಯಲ್ಲಿ ಮೂಡಿಬರಲಿರುವ ವಿನ್ಯಾಸಗಳು. ಇಂಥ ವಿನ್ಯಾಸಗಳು ಬೇರೆ ಯಾವುದೇ ಜ್ಯುವೆಲ್ಲರಿ ಮಳಿಗೆಯಲ್ಲಿ ಕಾಣಸಿಗುವುದಿಲ್ಲ..' ಎನ್ನುತ್ತಾರೆ ಸೀಮಾ.

ಇತ್ತೀಚೆಗೆ ಉತ್ತರ ಭಾರತೀಯರು ಮದುವೆಯ ದಿನ ಧರಿಸುವುದಕ್ಕಾಗಿ ದಕ್ಷಿಣ ಭಾರತೀಯ ಶೈಲಿಯ ಒಡವೆಗಳನ್ನು ಹೆಚ್ಚು ಇಷ್ಟಪಡುತ್ತಿದ್ದಾರೆ. ದಕ್ಷಿಣ ಭಾರತೀಯ ಯುವತಿಯರು 'ಮಾಂಗ್ಟಿಕಾ'ದಂತಹ ಒಡವೆಗೆ (ಒಂದೇ ಪೀಸ್‌ನಲ್ಲಿ ಪೆಂಡೆಂಟ್ ಮತ್ತು ಓಲೆ) ಆದ್ಯತೆ ನೀಡುತ್ತಿದ್ದಾರೆ. 'ಮಾಂಗ್ಟಿಕಾ'ದಿಂದ ಪೆಂಡೆಂಟ್ ಮತ್ತು ಓಲೆಗಳನ್ನು ತೆಗೆದು ಪ್ರತ್ಯೇಕವಾಗಿಯೂ ಧರಿಸಿಕೊಳ್ಳಬಹುದು' ಎನ್ನುತ್ತಾರೆ ಸೀಮಾ ಮೆಹ್ತಾ.

'ಹಿಂದೆ ಟ್ರೆಡಿಷನಲ್ ಆಗಿದ್ದು ಇಂದು ಟ್ರೆಂಡಿ ಆಗಿದೆ..' ಎನ್ನುತ್ತಲೇ ವಜ್ರದ ಆಭರಣದ ವಿವಿಧ ವಿನ್ಯಾಸ, ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತಾರೆ ಕೊಯಮತ್ತೂರಿನ ಕೀರ್ತಿಲಾಲ್ ಕಂಪೆನಿಯಲ್ಲಿ ವಿನ್ಯಾಸ ವಿಭಾಗದ ವ್ಯವಸ್ಥಾಪಕಿ ಮಾಲಿನಿ.

### ಚುಂಬಕ ಶಕ್ತಿ

'ಈಗ ವಜ್ರದ ಒಡವೆ ಮೇಲೆ ಕಸ್ಟಮರ್ಸ್ ಫೋಕಸ್ ಚೆನ್ನಾಗಿದೆ. ಬರೀ ಯುವತಿಯರಷ್ಟೇ ಅಲ್ಲ, ಎಲ್ಲ ವಯೋಮಾನದ ಮಹಿಳೆಯರೂ ವಜ್ರದ ಆಭರಣದತ್ತ ಮೋಹಿತರಾಗಿದ್ದಾರೆ. ಇದಕ್ಕೆ ವಿಶೇಷ 'ಚುಂಬಕ ಶಕ್ತಿ' ಇದೆ. ಹೀಗಾಗಿ ವಜ್ರದ ಒಡವೆಯನ್ನು ಇಷ್ಟಪಡದವರು ಬಹಳ ಕಡಿಮೆ. ಈಗಂತೂ ಕೈಗೆಟುಕುವ ಬೆಲೆಯಲ್ಲಿ ವಜ್ರದ ಒಡವೆ ಲಭ್ಯವಿದೆ. 10 ಸಾವಿರ ರೂಪಾಯಿ